ಸಾಕ್ಷಿಯನ್ನು ದಿಃ **11.03.2024** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎಸ್ ಪಿ ವಕೀಲರಿಂದಃ

ನಾನು ಸಿವಿಲ್ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ . ನಾನು ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ್ದೇನೆ . ನನಗೆ ವಾರ್ಷಿಕ 8 ಲಕ್ಷ ಆದಾಯ ಇರುತ್ತದೆ . ಆ ಬಗ್ಗೆ ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಆರೋಪಿ ನನಗೆ 4-5 ವರ್ಷಗಳಿಂದ ಪರಿಚಯ . ಆರೋಪಿಯು ನಾಗೇಶ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದು , ನಾನು ಆಸ್ಪತ್ರೆಗೆ ಆಗಾಗೆ ಹೋಗುತ್ತಿದ್ದ ಕಾರಣ ಪರಿಚಯವಾಗಿರುತ್ತದೆ . ನಾನು ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗುತ್ತಿದ್ದೆ . ಆ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ . ಆರೋಪಿ ನನಗೆ ಪರಿಚಯ ಆದ 6 ತಿಂಗಳ ನಂತರ ನನ್ನ ಮತ್ತು ಆತನ ನಡುವೆ ಹಣಕಾಸಿನ ವ್ಯವಹಾರ ನಡೆದಿರುತ್ತದೆ . ಆರೋಪಿ ಆಗಾಗ 10 ಸಾವಿರಗಳನ್ನು ತೆಗೆದುಕೊಂಡು ವಾಪಸ್ ಮಾಡಿದ್ದರು . ಸದರಿ ವ್ಯವಹಾರ 2 ಬಾರಿ ಆಗಿರುತ್ತದೆ . ಆ ಸಮಯದಲ್ಲಿ ಯಾವುದೇ ಚೆಕ್ ನ್ನು ನೀಡಿರುವುದಿಲ್ಲ .

ಆರೋಪಿಯು ದಿನಾಂಕ 21.10.2020 ರಂದು ನನ್ನ ಬಳಿ ಹಣ ಕೇಳಿರುತ್ತಾರೆ . ಆ ಸಮಯದಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೆವು . ಆ ದಿನ ಆರೋಪಿ ನನ್ನ ಬಳಿ 2 ಲಕ್ಷ ಕೇಳಿರುತ್ತಾನೆ . ಸದರಿ ಹಣವು ನನಗೆ ಸೈಟ್ ಮಾರಾಟ ಮಾಡಿದ್ದು ಮತ್ತು ಬ್ಯಾಂಕಿನಿಂದ ಒಡಿ

ತೆಗೆದುಕೊಂಡಿದ್ದು, ಆ ಮೂಲಕ ಬಂದಿರುತ್ತದೆ . ಸದರಿ ಹಣವನ್ನು ನಾನು ಕ್ರೆಡಿಟ್ ಕಾರ್ಡಿನಲ್ಲಿ ಸ್ವೈಪ್ ಮಾಡುವ ಮೂಲಕ ಕೊಟ್ಟಿರುತ್ತೇನೆ . ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ .

ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಮಾಹಿತಿ ಇದೆ . ನನಗೆ 4-5 ಬ್ಯಾಂಕುಗಳಲ್ಲಿ ಖಾತೆ ಇರುತ್ತದೆ . ನಾನು ಎಲ್ಲಾ ವ್ಯವಹಾರಗಳನ್ನು ಚೆಕ್ ಮುಖಾಂತರ ಮಾಡುತ್ತೇನೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಆರೋಪಿ ತಕ್ಷಣ ಹಣ ಬೇಕು ಎಂದು ಹೇಳಿದ ಕಾರಣ ಆ ವ್ಯವಹಾರ ಮಾಡಿರುತ್ತೇನೆ . ಆರೋಪಿಗೆ ಹಣವನ್ನು ಚೆಕ್ ಮುಖಾಂತರ ಕೊಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಬಳಿ ಅಷ್ಟು ಹಣ ಇಲ್ಲದೇ ಇರುವ ಕಾರಣ ಬ್ಯಾಂಕಿನಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು ನನ್ನ ಮಾವನ ಬಳಿ ಸ್ವಲ್ಪ ಹಣ ತೆಗೆದುಕೊಂಡು ಆರೋಪಿಗೆ ನೀಡಿರುತ್ತೇನೆ . ನನ್ನ ಮಾವನ ಹೆಸರು ರಮೇಶ . ಆತ ಲೇವಾದೇವಿ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ . ಆರೋಪಿ ನನ್ನ ಮಾವನ ಹತ್ತಿರ ವ್ಯವಹಾರ ಮಾಡಿರುತ್ತಾನೆ ಎಂದರೆ ಸರಿಯಲ್ಲ . ಆ ಸಂಬಂದ ನಿಪಿ 1 ಚೆಕ್ಕನ್ನು ಆರೋಪಿ ನನ್ನ ಮಾವನಿಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ . ನನ್ನ ಮಾವ ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರನ್ನು ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ . ಆರೋಪಿ ನನಗೆ ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಮಾವ ರಮೇಶ್ ಸಹ ಹಲವಾರು ಜನರ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ .

ನಾನು ಆರೋಪಿಗೆ ದಿನಾಂಕ 13.11.2021 ರಲ್ಲಿ ಹಣವನ್ನು ಆರೋಪಿಗೆ ಚನ್ನರಾಯಪಟ್ಟಣದ ನಾಗೇಶ್ ಆಸ್ಪತ್ರೆ ಬಳಿ ಕೊಟ್ಟಿರುತ್ತೇನೆ . ಆಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಆರೋಪಿ ನನಗೆ 3 ತಿಂಗಳ ಒಳಗಾಗಿ ಹಣವನ್ನು ವಾಪಸ್ ಮಾಡಿರುತ್ತೇನೆ ಎಂದು ತಿಳಿಸಿ ಚೆಕ್ ನ್ನು ನೀಡಿರುತ್ತಾರೆ . ಆರೋಪಿ ನನಗೆ ಚೆಕ್ ನ್ನು ಒಕ್ಕಣೆಗಳನ್ನು ಮಾಡಿ ಕೊಟ್ಟಿರುತ್ತಾರೆ . ಸದರಿ ಒಕ್ಕಣೆಗಳನ್ನು ಮತ್ತು ಸಹಿಯನ್ನು ನನ್ನ ಸಮಕ್ಷಮ ಮಾಡಿರುತ್ತಾರೆ . ನಿಪಿ 1 ರಲ್ಲಿರುವ ಸಹಿ ಮತ್ತು ಇತರ ಒಕ್ಕಣೆಗಳು ಬೇರೆ ಬೇರೆ ಶಾಹಿ ಮತ್ತು ಬರವಣಿಗೆಯಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಸಹಿಯನ್ನು ಒಂದು ಪೆನ್ನಿನಿಂದ ಮಾಡಿದ್ದು , ಅದರಲ್ಲಿ ಇಂಕು ಖಾಲಿ ಆದ ಕಾರಣ ಉಳಿದ ಒಕ್ಕಣೆಗಳನ್ನು ಬೇರೆ ಇಂಕಿನಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಆರೋಪಿಯು ಮೊದಲು ಸಹಿ ಮಾಡಿರುತ್ತಾನೆ ನಂತರ ಒಕ್ಕಣೆಗಳನ್ನು ಮಾಡಿರುತ್ತಾನೆ . ಬೇರೆ ಚೆಕ್ಕನ್ನು ಕೊಡುವಂತೆ ತಿಳಿಸಿರಲಿಲ್ಲ. ನನ್ನ ಮಾವನ ಪರವಾಗಿ ಆರೋಪಿ ನೀಡಿದ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ .

ಆರೋಪಿಯು ಒಂದು ದಿನ ಮುಂಚಿತವಾಗಿ ಚೆಕ್ ನ್ನು ನಗದೀಕರಣಕ್ಕಾಗಿ ಸಲ್ಲಿಸುವಂತೆ ತಿಳಿಸಿದ ಕಾರಣ ನಾನು 13.01.2022 ರಂದು ಚೆಕ್ ನ್ನು ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ . ನಾನು ಆರೋಪಿಯನ್ನು ಖುದ್ದು ಭೇಟಿ ಮಾಡಿ ಹಣ ಕೇಳಿದ್ದೆ . ಮಾರನೇ ದಿನ ಚೆಕ್ ನ್ನು ಹಾಜರುಪಡಿಸುವಾಗ ದೂರವಾಣಿ ಕರೆ ಮಾಡಿದ್ದೆ . ಸದರಿ ಚೆಕ್ ಖಾತೆ ಮುಚ್ಚಿದೆ ಮತ್ತು ಸಾಕಷ್ಟು ಮೊತ್ತ ಇಲ್ಲ ಎಂದು ವಾಪಸ್

ಬಂದಿರುತ್ತದೆ . ನಾನು ದಿನಾಂಕ 14.01.2022 ರಂದು ಆರೋಪಿಗೆ ಚೆಕ್ ಅಮಾನ್ಯವಾದ ಬಗ್ಗೆ ವಿಚಾರಿಸಿರುತ್ತೇನೆ .

ನಮ್ಮ ಕುಟುಂಬಕ್ಕೆ ಬಿ ಪಿ ಎಲ್ ಪಡಿತರ ಚೀಟಿ ಇದೆ ಎಂದರೆ ಸರಿಯಲ್ಲ . ನಾನು ನೋಟೀಸನ್ನು ಚೆಕ್ ಅಮಾನ್ಯವಾಗಿದೆ ಎಂದು ಕಳುಹಿಸಿರುತ್ತೇನೆ . ಸದರಿ ನೋಟೀಸು ಆರೋಪಿಗೆ ಜಾರಿಯಾಗಿರುತ್ತದೆ . ಆರೋಪಿ ನನಗೆ ಪರಿಚಯ ಇಲ್ಲದೇ ಇದ್ದರೂ ಸಹ ನನ್ನ ಮಾವನ ಬಳಿ ಚೆಕ್ಕನ್ನು ತೆಗೆದುಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿ ನನ್ನಿಂದ ಹಣ ಪಡೆದುಕೊಳ್ಳುವ ಯಾವುದೇ ದರದ್ದು ಇರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ . ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**